ಶ್ರೀ ಬಸವರಾಜ ಪಾಟೀಲ್ ಅನ್ವರಿ.—ಶಂಕರಿಕೊಪ್ಪ ಅವರ ಕಮೀಷನ್ನಿನ ರಿಪೋರ್ಟನ್ನು ಈಗಾಗಲೇ ಕೇಂದ್ರಕ್ಕೆ ಕಳಿಸಿಕೊಡಲಾಗಿದೆ. ಸಿ. ಸಿ. ಐ. ಮತ್ತು ಫೆಡರೇಷನ್‌ಗಳ ಉದ್ದೇಶವೇನೆಂದರೆ ರೈತನಿಗೆ ಬೆಲೆ ಕಡಿಮೆ ಆದಾಗ ಈ ಸಂಸ್ಥೆಗಳು ಸಪೋರ್ಟ್ ಬೆಲೆ ಕೊಟ್ಟು ಕೊಂಡುಕೊಳ್ಳುವುದು. ಈಗಲೂ ಈ ಸದನದ ಸದಸ್ಯರ ಸಲಹೆಗಳನ್ನು ಸರ್ಕಾರ ಪರಿಶೀಲನೆ ಮಾಡುತ್ತದೆ.

ಶ್ರೀ ಸಿ. ಭೈರೇಗೌಡ.—ಅಧ್ಯಕ್ಷರೇ, ಕೃಷಿ ಇಲಾಖೆಯಲ್ಲಿ ಕೆಲವು ಫಾರ್ಮಗಳಿವೆ. ಹಾಗೆಯೇ ಕೃಷಿ ವಿಶ್ವವಿದ್ಯಾಲಯದಲ್ಲೂ ಕೆಲವು ಫಾರ್ಮಗಳಿವೆ. ಅಲ್ಲಿ ತಲಾ ಟನ್ನಿಗೆ ಸರ್ಕಾರಕ್ಕೆ ತಗಲುವ ಬೆಲೆಯನ್ನೆ ಹೊರಗಡೆ ಸ್ವಂತ ಬೆಳೆಯುವ ರೈತರಿಗೂ ಕೊಡಲು ಸರ್ಕಾರ ಸಿದ್ಧವೇ ? ಶಂಕರಿಕೊಪ್ಪ ಕಮೀಷನನ್ನು ನೇಮಿಸಿದ್ದು ರಾಜ್ಯ ಸರ್ಕಾರ. ಅದೇ ರೀತಿ ರಾಜ್ಯ ಸರ್ಕಾರ ನೇಮಿಸಿದ ಇನೇ ಪೇ ಕಮಿಷನ್ನಿನ ರಿಪೋರ್ಟನ್ನು ಸರ್ಕಾರ ಅದು ವರದಿ ಒಪ್ಪಿಸಿದ ದಿವಸವೇ ಹೇಗೆ ಒಪ್ಪಿಕೊಂಡು ಸರ್ಕಾರಿ ನೌಕರರಿಗೆ ಸಂಬಳ ಜಾಸ್ತಿ ಮಾಡಲು ೨೦೦ ಕೋಟಿ ರೂಪಾಯಿಗಳನ್ನು ವಿಚ್ರ್ ಮಾಡಲು ತೀರ್ಮಾನಿಸಿತೋ ಅದೇ ರೀತಿ ಶಂಕರಿಕೊಪ್ಪ ರಿಪೋರ್ಟನ್ನೂ ಏಕೆ ಸರ್ಕಾರ ಒಪ್ಪಿಕೊಳ್ಳಲಿಲ್ಲ ? ಅದನ್ನು ಕೇಂದ್ರಕ್ಕೆ ಕಳಿಸಂವ ಅವಶ್ಯಕತೆ ಆದರೂ ಏನಿತ್ತು ? ನೀವೇ ತೀರ್ಮಾನ ತೆಗೆದುಕೊಳ್ಳಬಹುದಿತ್ತಲ್ಲ ?

ಶ್ರೀ ಬಸವರಾಜ ಪಾಟೀಲ್ ಅನ್ವರಿ.—ಮಾನ್ಯ ಅಧ್ಯಕ್ಷರೇ, ಶಾಸಕರಿಗೆ ರೈತರ ಬಗ್ಗೆ ಇರುವ ಕಳಕಳಿಯನ್ನು ನಾನೂ ಕೂಡ ಒಪ್ಪುತ್ತೇನೆ. ಬೆಲೆ ನಿಗದಿಪಡಿಸತಕ್ಕಂಥಾದ್ದು ಕೇಂದ್ರ ಸರಕಾರದ ವ್ಯಾಪ್ತಿಗೆ ಬರುತ್ತದೆ, ರಾಜ್ಯ ಸರಕಾರ ಅದರ ಬಗ್ಗೆ ಹೆಚ್ಚು ಶಿಫಾರಸ್ಸು ಮಾಡಬಹುದು ಕಾವು ಹೇಳತಕ್ಕಂಥಾದ್ದನ್ನು ಸರಕಾರದ ಗಮನಕ್ಕೆ ತರುತ್ತೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ —ಮಾನ್ಯ ಸಚಿವರ ಉತ್ತರ ಸ್ಪಷ್ಟವಾಗಿಲ್ಲ.

ಶ್ರೀ ಎಂ. ಎಸ್. ಕೃಷ್ಣನ್.—ನನಗೆ ಪ್ರಶ್ನೆ ಕೇಳಲು ಇನ್ನೊಂದು ಚಾನ್ಸ್ ಕೊಡಿ.

ಅಧ್ಯಕ್ಷರು.—ನಿಮಗೆ ಮೂರು ಸಲ ಚಾನ್ಸ್ ಕೊಟ್ಟಿದ್ದೇನೆ.

ಶ್ರೀ ಬಸವರಾಜ ಪಾಟೀಲ್ ಅನ್ವರಿ.—ಕೃಷಿ ವಿಶ್ವವಿದ್ಯಾನಿಲಯದಲ್ಲಿ ಆಗತಕ್ಕಂತಹ ವ್ಯತ್ಯಾಸದ ಮಾಹಿತಿ ಕೇಳಿದ್ದಾರೆ ನನ್ನ ಹತ್ತಿರ ಆ ವಿವರ ಇಲ್ಲ. ಶಂಕರಿಕೊಪ್ಪ ಕಮಿಟಿ ವರದಿ ಏನಿದೆ ಅದನ್ನೆಲ್ಲಾ ಗಮನದಲ್ಲಿಟ್ಟುಕೊಂಡು ಸರ್ಕಾರ ಕೇಂದ್ರಕ್ಕೆ ಶಿಫಾರಸ್ ಮಾಡಿದೆ.

ಶ್ರೀ ವೀರಪ್ಪ ಮೊಯಿಲಿ.—ಸನ್ಮಾನ್ಯ ಸದಸ್ಯರಾದಂತಹ ಕೃಷ್ಣನ್‌ರವರು ಕೇಳಿದ ಪ್ರಶ್ನೆಗೂ ಮಾನ್ಯ ಕೃಷಿ ಸಚಿವರು ನೀಡಿದ ಉತ್ತರಕ್ಕೂ ಸಂಬಂಧವಿಲ್ಲವೆಂದು ನನಗನ್ನಿಸುತ್ತದೆ. ಮಿನಿಮಮ್ ಪೈಸ್ ಅನ್ನು ಅಗ್ರಿಕಲ್ಚರ್‌ನವರು ಫಿಕ್ಸ್ ಮಾಡುತ್ತಾರೆ ಅದು ಕೇಂದ್ರ ಸರ್ಕಾರಕ್ಕೆ ಸಂಬಂಧಪಟ್ಟದ್ದು ಅವರು ಕೇಳುತ್ತಿರುವುದು ಸಪೋರ್ಟ್ ಪ್ರೈಸ್ ಬಗ್ಗೆ. ಅವರು ಫಿಕ್ಸ್ ಮಾಡುವುದಕ್ಕೂ ಸಪೋರ್ಟ್ ಪ್ರೈಸ್‌ಗೂ ವ್ಯತ್ಯಾಸವಿದೆ ಉದಾಹರಣೆಗೆ ಹೇಳುವುದಾದರೆ ಷುಗರ್‌ಕೇನ್‌ಗೆ ಹೈ ಪವರ್ ಕಮಿಟಿ ಇದೆ ಮಾನ್ಯ ಮಂತ್ರಿಯವರು ಅದಕ್ಕೆ ಅಧ್ಯಕ್ಷರಾಗಿದ್ದು ಪ್ರತಿ ವರ್ಷ ಸಪೋರ್ಟ್ ಪ್ರೈಸ್ ಅನ್ನು ನಿರ್ಣಯ ಮಾಡುತ್ತಾರೆ. ಅಗ್ರಿಕಲ್ಚರ್ ಪ್ರೈಸ್ ಕಮೀಷನ್‌ನವರು ನಿರ್ಣಯ ಮಾಡಿದಂತಹ ರೇಟ್ ಇರುವುದಿಲ್ಲ ಇನ್ನೂ ಹೆಚ್ಚು ಇರುತ್ತದೆ ಒಂದೊಂದು ರಾಜ್ಯಕ್ಕೆ ಸಂಬಂಧಪಟ್ಟಂತೆ ಸಪೋರ್ಟ್ ಪ್ರೈಸ್ ಅನ್ನು ಫಿಕ್ಸ್ ಮಾಡುತ್ತಾರೆ, ಇದು ಕಬ್ಬಿಗೆ ಮಾತ್ರ ಸೀಮಿತವಾಗಬಾರದು ಮಾನ್ಯ ಮುಖ್ಯಮಂತ್ರಿಯವರ ಅಥವಾ ತಮ್ಮ ಅಧ್ಯಕ್ಷತೆಯಲ್ಲಿ ಜೋಳ, ಭತ್ತ, ಹತ್ತಿ ಮಂಡಕಾದಕ್ಕೆ ಕೂಡ ಅನ್ವಯಿಸುವಂತೆ ಒಂದು ಸಮಿತಿಯನ್ನು ನೇಮಿಸಿ ಷುಗರ್ ಕೇನ್‌ಗೆ ಯಾವ ರೀತಿ ಸಪೋರ್ಟ್ ಪ್ರೈಸ್ ಫಿಕ್ಸ್ ಮಾಡುತ್ತೀರಿ ಅದೇ ರೀತಿ ಮಾಡಬಹುದು. ರಿಸರ್ವ್ ಬ್ಯಾಂಕ್ ಮೂಲಕ ಪರ್ಮಿಷನ್ ತೆಗೆದುಕೊಂಡು ಆಯಾ ಸಂಸ್ಥೆಗಳಿಗೆ ಹಣವನ್ನು ಒದಗಿಸಿ ಸಪೋರ್ಟ್ ಪ್ರೈಸ್ ಫಿಕ್ಸ್ ಮಾಡುತ್ತೀರಾ ಎಂದು ಮಾನ್ಯ ಸದಸ್ಯರು ಪ್ರಶ್ನೆ ಕೇಳಿದ್ದು. ತಾವು ಹೇಳುತ್ತಿರುವುದು ಅಗ್ರಿಕಲ್ಚರ್ ಪ್ರೈಸ್ ಬಗ್ಗೆ ಆ ಉತ್ತರ ಬೇಕಾದರೆ ಪಾರ್ಲಿಮೆಂಟ್‌ನಲ್ಲಿ ಪ್ರಶ್ನೆ ಕೇಳುತ್ತಿದ್ದರು ಇಲ್ಲಿ ಅವರು ಆ ಪ್ರಶ್ನೆಯನ್ನು ಕೇಳುತ್ತಿರಲಿಲ್ಲ.

ಶ್ರೀ ಬಸವರಾಜ ಪಾಟೀಲ್ ಅನ್ವರಿ.—ಮಾನ್ಯ ವೀರಪ್ಪ ಮೊಯಿಲಿಯವರ ಸಲಹೆ ಬಹಳ ಸಮಂಜಸವಾಗಿದೆ ಅದನ್ನು ಸರಕಾರ ಪರಿಶೀಲನೆ ಮಾಡುತ್ತದೆ.

ಪ್ರಶ್ನೆ, ೬೬೦

(ಮಾನ್ಯ ಸದಸ್ಯರು ಗೈರು ಹಾಜರಾಗಿದ್ದರು)